# ನವರಾತ್ರಿಗೆ ಅಂದದ ಅಲಂಕಾರ



ಹಬ್ಬ, ಶುಭ ಸಂದರ್ಭಗಳಿಗೆ ತಕ್ಕಂತೆ ಮಹಿಳೆಯರು ಉಡುಗೆ, ತೊಡುಗೆಯಲ್ಲಿ ಕಂಗೊಳಿಸುವ ಉತ್ಸಾಹಕ್ಕೆ ಎಲ್ಲೆಯೇ ಇಲ್ಲ. ಉಡುಪಿಗೆ ತಕ್ಕಂತೆ ಆಭರಣ ತೊಡುವುದು, ಕೇಶ ವಿನ್ಯಾಸ ಮಾಡುವುದು, ಮುಖ್ಯವಾಗಿ ಅಂದದ ಮೊಗದ ಸೌಂದರ್ಯ ಹೆಚ್ಚಿಸುವಲ್ಲಿ ಬಹುತೇಕ ಸ್ತ್ರೀಯರು ತುಸು ಹೆಚ್ಚೇ ಗಮನ, ಕಾಳಜಿ ವಹಿಸುತ್ತಾರೆ.

ನವರಾತ್ರಿಯ ಸಂಜೆ ವೇಳೆ ನಡೆಯುವ ದಾಂಡಿಯಾ ನೃತ್ಯದಲ್ಲಿ ಭಾಗವಹಿಸುವುದೇ ಒಂದು ಸಂಭ್ರಮ. ಝಗಮಗಿಸುವ ಬಣ್ಣದ ದೀಪಗಳ ಬೆಳಕಿನಲ್ಲಿ ಬಗೆಬಗೆಯ ಉಡುಪು ಧರಿಸಿ, ಕೋಲಾಟ ಆಡುವ ಖುಷಿಗೆ ಪಾರವೇ ಇರದು. ಗ್ಲಾಮರಸ್ ಮತ್ತು ಬೋಲ್ಡ್ ಆಗಿ ಕಾಣಲು ನಮ್ಮ ಮೇಕಪ್ ಹೇಗಿದ್ದರೆ ಚೆನ್ನ ಎಂಬ ಬಗ್ಗೆ ತಿಳಿಯೋಣ.

ನಮ್ಮ ದೇಹದ ಬಣ್ಣ ಯಾವುದೇ ಇರಲಿ ಮುಖ ಮಾತ್ರ ಆಕರ್ಷಕವಾಗಿರಬೇಕು ಎನ್ನುವುದಕ್ಕೆ ಬಹುತೇಕ ಮಹಿಳೆಯರು ಒತ್ತು ನೀಡುತ್ತಾರೆ. ಹಾಗಾಗಿ ಮುಖದ ಹೆಚ್ಚಿನ ಸೌಂದರ್ಯಕ್ಕಾಗಿ ಮೇಕಪ್ ಬೇಕೇ ಬೇಕು. ಮೇಕಪ್ ವಿಷಯ ಬಂದಾಗ ಇಲ್ಲಿ ಚರ್ಮ ಪ್ರಮುಖ ಪಾತ್ರ ವಹಿಸುತ್ತದೆ.

'ಚರ್ಮ ಯಾವ ರೀತಿಯದ್ದು ಎಂಬುದನ್ನು ಅರಿತ ಬಳಿಕವೇ ಮೇಕಪ್ ಮಾಡುವುದು ಪ್ರೊಫೆಷನಲ್ ಮೇಕಪ್‌ನ ಮುಖ್ಯ ನಿಯಮ' ಎನ್ನುತ್ತಾರೆ ಮೇಕಪ್ ಆರ್ಟಿಸ್ಟ್ ಸಂಗೀತಾ ಬಿ.

ಚರ್ಮದ ಅಲರ್ಜಿ ಇರುವವರು ತಾವು ಬಳಸುವ ಮೇಕಪ್ ವಸ್ತುಗಳ ಬಗ್ಗೆ ಹೆಚ್ಚಿನ ಜಾಗ್ರತಿ ವಹಿಸುವುದು ಮುಖ್ಯ. ಅತಿಯಾದ ಸೌಂದರ್ಯವರ್ಧಕಗಳನ್ನು ಬಳಕೆ ಮಾಡದೇ ಕಡಿಮೆ ಪ್ರಮಾಣದಲ್ಲಿ ಬಳಸಿ ಸಹಜ ಚರ್ಮದಂತೆಯೇ ಕಾಣುವ ಮೇಕಪ್ ಸಹ ಮಾಡಬಹುದು.

ವಿದ್ಯುತ್ ದೀಪಗಳ ಝಗಮಗಿಸುವ ಬೆಳಕಿನ ಶಾಖದಲ್ಲಿ ಬಹುತೇಕರು ಬೆವರುವುದು ಸಹಜ. ಹಾಗಾಗಿ ವಾಟರ್‌ಪ್ರೂಫ್, ಸ್ಮಡ್ಜ್ ಪ್ರೂಫ್ ಮೇಕಪ್ ಉತ್ಪನ್ನಗಳನ್ನು ಆಯ್ದುಕೊಳ್ಳುವುದು ಮುಖ್ಯ. ಮೊದಲು ಮುಖವನ್ನು ನೀರಿನಿಂದ ಸ್ವಚ್ಛಗೊಳಿಸಬೇಕು. ಐಸ್ ಕ್ಯೂಬ್‌ನಿಂದ 3 ರಿಂದ 5 ನಿಮಿಷಗಳ ಕಾಲ ಮಸಾಜ್ ಮಾಡಬೇಕು. ನಂತರ ಮಾಯಿಶ್ಚರೈಸರ್ ಮತ್ತು ಪ್ರೈಮರ್ ಹಚ್ಚಬೇಕು. ತೆಳುವಾದ ಮೇಕಪ್ ಮಾಡಿದರೆ ಹೆಚ್ಚು ಸೂಕ್ತ. ಗಾಢ ಮೇಕಪ್ ಹಾಕಿದರೆ ಮುಖವೆಲ್ಲ ಹರಡಿ, ಅಂದಗೆಡುವ ಸಾಧ್ಯತೆ ಹೆಚ್ಚು.

ಲಿಪ್‌ಸ್ಟಿಕ್ ಗಾಢವಾಗಿದ್ದು, ನ್ಯೂಡ್ ಬ್ಲಶ್ (ಕೆನ್ನೆಕೆಂಪು) ಹಚ್ಚುವುದರಿಂದ ಮುಖದಲ್ಲಿ ತಾಜಾತನ ಕಾಣಬಹುದು. ಫೌಂಡೇಷನ್, ಕನ್ಸಿಲರ್ ಹಾಗೂ ಪೌಡರ್‌ಗಳ ಕಡಿಮೆ ಬಳಕೆ ಮಾಡಿ, ತೆಳುವಾದ ಕಾಜಲ್, ಐ ಲೈನರ್‌ಗಳಿದ್ದರೆ ನೈಸರ್ಗಿಕ ನೋಟ ಪಡೆಯಬಹುದು. ಲಂಗ– ದಾವಣಿ, ಘಾಗ್ರಾ ಉಡುಗೆಗೆ ಇದು ಸೂಕ್ತ ಎನಿಸುವುದು.

## ಏರ್ ಬ್ರೇಷ್ ಮೇಕಪ್

ಎಲೆಕ್ಟ್ರಿಕ್ ಸಾಧನಗಳನ್ನು ಬಳಕೆ ಮಾಡಿ ಉತ್ತಮವಾದ ಹಾಗೂ ವೃತ್ತಿಪರ ಮೇಕಪ್ ಲುಕ್ ಪಡೆಯಲು ಬಳಸುವ ತಂತ್ರಜ್ಞಾನವಿದು. ನಟ, ನಟಿಯರು, ಸೆಲೆಬ್ರಿಟಿಗಳು ಇದನ್ನು ಹೆಚ್ಚು ಬಳಸುತ್ತಾರೆ. ಟೋನರ್, ವಾಟರ್‌ಜೆಲ್, ಮಾಯಿಶ್ಚರೈಸರ್ ಬೇಸ್ ಫ್ರೀ ಮೇಕಪ್ ಕ್ರೀಂ, ಕಲರ್ ಕರೆಕ್ಷನ್ ಕ್ರೀಂ, ಫೌಂಡೇಷನ್ ಬಳಸಿ, ಬಳಿಕ ಏರ್ ಬ್ರಷ್ ಮೂಲಕ ಸ್ಕಿನ್ ಈವನ್ ಟೋನ್ ಮಾಡುವುದು. ಕೆನ್ನೆಗಳಿಗೆ ಚೀಕ್ ರೋಸ್ ಬಳಸಿ, ನೋಸ್ ಪಾಯಿಂಟ್, ಚೀಕ್ಸ್ ಹೈಲೈಟ್ ಮಾಡಿ, ಬ್ರಷ್‌ನಿಂದ ಫಿನಿಷಿಂಗ್ ಮಾಡಿ, ಕಾಡಿಗೆ, ಐ ಶೇಡ್ಸ್, ಐ ಲ್ಯಾಷಸ್, ಐಬ್ರೊ ಹೈಲೈಟರ್, ಲಿಪ್‌ಸ್ಟಿಕ್ ಹಚ್ಚಿ, ಮೇಕಪ್ ಸ್ಪ್ರೇ ಮಾಡಿದರೆ ಸುಂದರ ಲುಕ್ ನಿಮ್ಮದಾಗುವುದು. ಲೆಹೆಂಗಾ, ಹೆವಿ ವರ್ಕ್ ಡಿಸೈನರ್ ಡ್ರೆಸ್‌ಗಳಿಗೆ ಇದು ಹೆಚ್ಚು ಸೂಕ್ತ.

## ಎಚ್‌.ಡಿ. ಮೇಕಪ್

ಇಲ್ಲಿ ಅತ್ಯಾಧುನಿಕ ತಂತ್ರಜ್ಞಾನದ, ಗುಣಮಟ್ಟದ ಉತ್ಪನ್ನಗಳನ್ನು ಬಳಸಿ ಮುಖದಲ್ಲಿನ ಕಲೆಗಳನ್ನು ಮತ್ತು ಸುಕ್ಕನ್ನು ಮರೆಮಾಚಿಸಿ ಮುಖದ ಸೌಂದರ್ಯವನ್ನು ಆಕರ್ಷಕವಾಗಿರುವಂತೆ ಮಾಡುವುದು. ಹೆವಿ ವರ್ಕ್ ಡಿಸೈನರ್ ಡ್ರೆಸ್‌ಗಳಿಗೆ ಸೂಕ್ತ. ನೃತ್ಯದ ವೇಳೆ ಟಚ್ ಅಪ್‌ಗಾಗಿ ಕಾಂಪ್ಯಾಕ್ಟ್ ಲಿಪ್‌ಸ್ಟಿಕ್, ಐ ಲೈನರ್ ಅವಶ್ಯವಿದ್ದಲ್ಲಿ ಮರೆಯದೇ ತೆಗೆದುಕೊಂಡು ಹೋಗಿ. ಮುಖದಲ್ಲಿ ಹೆಚ್ಚಾದ ಎಣ್ಣೆ ಅಂಶವನ್ನು ತೆಗೆದು ಹಾಕಲು ಮತ್ತು ರಿಫ್ರೆಶ್ ಲುಕ್ ನೀಡಲು ಬ್ಲೋಟಿಂಗ್ ಪೇಪರ್ ಸಹಕಾರಿಯಾಗಬಲ್ಲದು. ಮೇಕಪ್ ತೆಗೆದು ಹಾಕುವಾಗಲೂ ಎಚ್ಚರಿಕೆ ಕ್ರಮ ವಹಿಸುವುದು ಮುಖ್ಯ. ಅಂಗಡಿಗಳಲ್ಲಿ ಸಿಗುವ ಮೇಕ್ ಅಪ್ ರಿಮೂವರ್ ಕ್ರೀಂ ಇತ್ಯಾದಿಗಳನ್ನು ಬಳಸಬಹುದು ಅಥವಾ ಮನೆಯಲ್ಲಿ ಕೊಬ್ಬರಿ ಎಣ್ಣೆ, ಬಾದಾಮಿ ಎಣ್ಣೆಯನ್ನು ಮುಖದೆಲ್ಲೆಡೆ ಹಚ್ಚಿ, ಹತ್ತಿಯಿಂದ ತೆಗೆಯಬಹುದು. ■

ನವರಾತ್ರಿಯ ಸಂಜೆ ವೇಳೆ ನಡೆಯುವ ದಾಂಡಿಯಾ ನೃತ್ಯದಲ್ಲಿ ಭಾಗವಹಿಸುವುದೇ ಒಂದು ಸಂಭ್ರಮ. ಝಗಮಗಿಸುವ ಬಣ್ಣದ ದೀಪಗಳ ಬೆಳಕಿನಲ್ಲಿ ಬಗೆಬಗೆಯ ಉಡುಪು ಧರಿಸಿ, ಕೋಲಾಟ ಆಡುವ ಖುಷಿಗೆ ಪಾರವೇ ಇರದು. ಗ್ಲಾಮರಸ್ ಮತ್ತು ಬೋಲ್ಡ್ ಆಗಿ ಕಾಣಲು ಮೇಕಪ್ ಹೇಗಿದ್ದರೆ ಚೆನ್ನ?

■ ಕಲಾವತಿ ಬೈಚಬಾಳ



